ಶ್ರೀ ಎಂ. ಎನ್. ರಾಮಣ್ಣ.—ಈ ವಸೂಲಿ ಕ್ರಮವನ್ನು ಪಂಚಾಯಿತಿಯಿಂದ ತೆಗೆದು ಲ್ಯಾಂಡ್ ರೆವಿನ್ಯೂ ಡಿಪಾರ್ಟ್‌ಮೆಂಟ್‌ಗೆ ಕೊಡುವುದು ನಿಜವೇ ?

ಶ್ರೀ ಬಿ. ಎಲ್. ಗೌಡ.—ಅಮ ನಿಜವಲ್ಲ. ಸೆಕ್ರೆಟರಿಯವರನ್ನು ನೇಮಕ ಮಾಡಿ ಆದಷ್ಟು ಶೀಘ್ರದಲ್ಲೇ ವಸೂಲ್ಮಾಡುತ್ತೇವೆ.

Smt. WINNIFRED F. FERNANDES.–You have stated that the total arrears in South Kanara District is Rs. 7 lakhs and odd. May I know the arrears talukwise ?

Sri B. L. GOWDA.—The break-up is as follows :

		Rs.
Udipi	...	1,71,034
Puttur	...	81,334
Coondapur	...	99,866
Belthangadi	...	75,732
Bantwal	...	88,447
Mangalore	...	1,10,105
Sulia	...	37,465
Karkal	...	1,72,000

ಶ್ರೀ ಎನ್. ಕೆ. ಅಮೀನ್.—ತಾವು ನೇಮಕ ಮಾಡಲಿರುವ ವಿಲೇಜ್ ಅಕೌಂಟೆಂಟ್‌ಗಳು ಪಂಚಾಯಿತಿ ಮಿತಿಯಲ್ಲಿ ಕೆಲಸಮಾಡುತ್ತಾರೋ ಅಥವಾ ತಾಸೀಲ್ದಾರರ ಮಿತಿಯಲ್ಲಿ ಕೆಲಸ ಮಾಡುತ್ತಾರೋ ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಅದಕ್ಕೆ ಉತ್ತರ ಹೇಳಿದ್ದೇನೆ. 10 ಸಾವಿರ ರೂಪಾಯಿ ಮತ್ತು ಅದಕ್ಕಿಂತ ಹೆಚ್ಚು ವರಮಾನವಿರುವ ಗ್ರಾಮ ಪಂಚಾಯಿತಿಗಳಲ್ಲಿ ಪೂರ್ಣ ಕಾಲದ ಕಾರ್ಯದರ್ಶಿಗಳ ವ್ಯಾಪ್ತಿಯಲ್ಲಿ ಒಳಪಡುತ್ತದೆ. 10 ಸಾವಿರ ರೂಪಾಯಿಗಿಂತ ಕಡಿಮೆ ವರಮಾನವಿರುವ ಪಂಚಾಯಿತಿಗಳು ಅಲ್ಲಿರುವ ಗ್ರಾಮ ವಿಲೇಜ್ ಅಕೌಂಟೆಂಟ್ಸ್‌ನವರ ಮುಟ್ಟದಲ್ಲಿರುತ್ತದೆ.

ಶ್ರೀ ಬಿ. ಎಂ. ಇದಿನಬ್ಬ.—ಸ್ವಾಮಿ, 440 ಪಂಚಾಯಿತಿಗಳಲ್ಲಿ ವಸೂಲಿ ಬಹಳ ಕಡಿಮೆಯಾಗಿದೆ. ಆದುದರಿಂದ ಈ ಅರಿಯರ್ಸ್‌ನ್ನು ಕಲೆಕ್ಟ್ ಮಾಡಲು ತಕ್ಕ ಕಾರ್ಯಕ್ರಮ ತೆಗೆದು ಕೊಳ್ಳುವುದಕ್ಕೆ ತಾಲ್ಲೂಕುಬೋರ್ಡುಗಳಿಗೆ ಆದೇಶ ಕೊಟ್ಟಿಲ್ಲವೇ ?

ಶ್ರೀ ಬಿ. ಎಲ್. ಗೌಡ.—ಈಗಾಗಲೇ ಅದರ ಬಗ್ಗೆ ಹೇಳಿದ್ದೇನೆ. ಡಿವಿಷನಲ್ ಕಮೀಷನರ್ ಡೆಪ್ಯೂಟಿ ಕಮಿಷನರ್, ಮತ್ತು ಬಿ.ಡಿ.ಓ. ಗಳಿಗೆ ಎಲ್ಲಾ ಪಂಚಾಯಿತಿಗಳಲ್ಲೂ ಅರಿಯರ್ಸನ್ನು ಕಲೆಕ್ಟ್ ಮಾಡಬೇಕೆಂದು ನೋಟಿಸ್ ಕೊಟ್ಟಿದ್ದೇವೆ.

Disposal of Lands of Hosapatna Becharak Belaganahalli, Kasaba Hobli

161. Sri M. K. BOMME GOWDA (K. R. Pet).—

Will the Minister for Revenue be pleased to state :—

(*a*) whether there is any porposal before Government to dispose of lands of Hosapatna Becharak, Belaganahalli, Kasaba Hobli, K.R.Pet Taluk in one of the following ways :

(i) through darkhast ;

(ii) handing it over to Forest department for growing medicinal plants ;

(iii) to give it to the Birds Sanctuary ;

(*b*) if so, whether any definite decision has been taken ?

Sri H. V. KOUJALGI (Minister for Revenue).—

(*a*) (i) The question can be considered only if this A. M. Kaval land is surrendered by the Animal Husbandry Department.

(ii) There is no such proposal at present.

(iii) This question is also under consideration.

(*b*) No definite decision has been taken as yet.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೃಷ್ಣರಾಜಪೇಟೆ ತಾಲ್ಲೂಕು ಕಸಬಾ ಹೋಬಳಿಯ ಹೊಸ ಪಟ್ಟಣ ಬೇಚಿರಾಕಿನಲ್ಲಿರುವ ಜಮೀನುಗಳನ್ನು ದರಖಾನ್ತು ಮೂಲಕ ಕೊಡುವುದಕ್ಕೆ ಉತ್ತರ ಏನೂ ಹೇಳಿಲ್ಲ. ಏನು ಕಾರಣ ? ದರಖಾನ್ತು ಮೂಲಕ ಕೊಡುತ್ತೀರಾ ಹೇಗೆ ?

ಶ್ರೀ ಹೆಚ್. ವಿ. ಕೌಜಲಗಿ.—ಕೆಲವು ಜಮೀನುಗಳನ್ನು ಕೊಡಬೇಕೆಂದು ಕೇಳಿಕೊಂಡಿದ್ದಾರೆ. ಸರ್ಕಾರಕ್ಕೆ ಈಗ ಅದನ್ನು ಕೊಡುವ ವಿಚಾರವಿಲ್ಲ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಸ್ವಾಮಿ, ಆ ಜಮೀನಿನಲ್ಲಿ ಭಾಗಶಃ ಕೊಡುವುದಕ್ಕಾದರೂ ಪರಿಶೀಲನೆ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಅದು ಹಾರ್ಟಿಕಲ್‌ಚರ್‌ಗೆ ಸಂಬಂಧಪಟ್ಟದ್ದು. ಅವರು ಬೇಡ ಎಂದರೆ ಅದನ್ನು ಕೊಡುವುದಕ್ಕೆ ವಿಚಾರ ಮಾಡುತ್ತೇನೆ.

ಶ್ರೀ ಎಸ್. ಎಸ್. ಅರಕೇರಿ.—ಅದನ್ನು ಹಿಂದೇನೇ ಹರಿಜನರಿಗೆ ಕೊಡಬೇಕಾಗಿತ್ತು. ಇಲ್ಲಿಯವರೆಗೂ ಅದರ ಬಗ್ಗೆ ಏನೂ ಹೇಳಲಿಲ್ಲ. ಆದುದರಿಂದ ಆ ಜಮೀನುಗಳನ್ನು ಹರಿಜನರಿಗೆ ಕೊಡಬೇಕೆಂದು ಪಶುಸಂಗೋಪನಾ ಇಲಾಖೆಯವರಿಂದ ಬಿಡಿಸಿಕೊಳ್ಳುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಹೆಚ್. ವಿ. ಕೌಜಲಗಿ.—ಅದು ಪಶುಸಂಗೋಪನಾ ಇಲಾಖೆಯವರಿಗೆ ಸಂಬಂಧಪಟ್ಟದ್ದು. ಅವರು ಬೇಡ ಎಂದು ಏನು ಹೇಳಲಿಲ್ಲವಲ್ಲಾ.

Sri N. A. CHANNEGOWDA.—What are the hurdles in the way of the Animal Husbandry Department to surrender the land ? What are the other questions under your consideration ?

ಶ್ರೀ ಹೆಚ್. ವಿ. ಕೌಜಲಗಿ.—ಅದಕ್ಕೆ ಅಡಚಣೆ ಇದೆ. ಆ ಸಂಸ್ಥೆ ಬೇಡ ಎಂದರೆ ಆಗ ಯಾವ ರೀತಿ ಕೊಡಬೇಕು ಎನ್ನುವ ವಿಷಯ ಬರುತ್ತದೆ.

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ, ಪಶುಸಂಗೋಪನಾ ಇಲಾಖೆಯವರು ಅಮೃತ ಮಹಲ್ ಕಾವಲ್‌ನಲ್ಲಿ 15,000 ಎಕರೆಯನ್ನು ಐದು ಅರು ವರ್ಷಗಳ ಹಿಂದೆ ರೆವಿನ್ಯೂ ಡಿಪಾರ್ಟ್‌ಮೆಂಟಿಗೆ ವಿಲೇವಾರಿ ಮಾಡುವುದಕ್ಕೆ ವಹಿಸಿಕೊಟ್ಟಿದ್ದಾರೆ. ಈ ಸಂಬಂಧದಲ್ಲಿ ಒಂದು ಸರಕಾರಿ ಹುಕುಂ ಆಗಿರುವುದು ತಮಗೆ ಗೊತ್ತಿಲ್ಲವೇ ?

Mr. SPEAKER.—It does not arise out of this question.

ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಅಮೃತಮಹಲ್‌ಗೆ ಸೇರಿದ ಜಮೀನಿನ ವಿಚಾರದಲ್ಲಿ ಅನ್ಯಾಯವಾಗಿದೆ. Hon'ble Speaker is purposely avoiding my question.

Mr. SPEAKER.—Hon. Member should withdraw the words "purposely avoiding".

ಶ್ರೀ ಎಂ. ಹೆಚ್. ಜಯಪ್ರಕಾಶ್ ನಾರಾಯಣ್.—ಅಧ್ಯಕ್ಷರ ಮನಸ್ಸಿಗೆ ಏನಾದರೂ ನೋವಾಗಿದ್ದರೆ ನಾನು ಆ ಪದಗಳನ್ನು ವಾಪಸ್ ತೆಗೆದುಕೊಳ್ಳುತ್ತೇನೆ.

Sri G. DUGGAPPA.—Did not Government take a decision preyiously to release some Amruth Mahal Kaval lands including this piece of land ?

Sri H. V. KOUJALGI.—So far as these lands are concerned, the Government had not taken any such decision.

Institute of Speech and Hearing, Mysore

163. Sri K. M. THAMMIAH (Kadur).—

Will the Minister for Social Welfare be pleased to state :—

(*a*) whether there is an Institute called the Indian Institute of Speech and Hearing located at Mysore City ;

(*b*) whether the State Government have given any assistance to the said institute ;

(*c*) if not, whether they intend to give any assistance to the institute, and provide necessary hostel facilities to the immates of the institute since such facilities are not available there ?

Sri V. L. PATIL (Minister for Social Welfare).—

(*a*) Yes. The correct name of the institution is "All India Institute of Speech and Hearing, Mysore."

(*b*) The following assistance has been given by the State Government to this Institute :—

1. It is agreed to upgrade the Associated Specialist Departments at the Mysore Medical College and permitting the Institute to utilise the services of some specialists on a moderate honorarium ;
2. Twenty beds have been sanctioned in the K.R. Hospital, Mysore, for the use of the cases from the Institute which require hospitalisation ;
3. The E. N. T. Department of Mysore Medical College has been upgraded and provisions are being made for microsurgery of the ear to attend to the referrals from this Institute.
4. Facilities have also been provided for establishing a Speech and Hearing Clinic at the K.R. Hospital Out-patients Department with the equipment and staff belonging to the Institute and the Clinic is functioning since February 1969.

(*c*) Does not arise in view of reply to clause (*b*) above.

ಶ್ರೀ ಕೆ. ಎಂ. ತಮ್ಮಯ್ಯ.—ಈ ಸಂಸ್ಥೆ ಮಹಾರಾಜಾಕಾಲೇಜಿನ ಡೈಮಂಡ್ ಜೂಬಲಿ ಕಟ್ಟಡದಲ್ಲಿ ಇತ್ತು. ಆ ಕಟ್ಟಡ ನಾಲ್ಕೆ ಇರುವುದರಿಂದ ಬೇರೆ ಕಟ್ಟಡ ಕಟ್ಟಿಕೊಡುವುದಕ್ಕೆ ಸರಕಾರ ಏನಾದರೂ ಪ್ರಯತ್ನ ಮಾಡುತ್ತದೆಯೇ ?